(ದಿನಾಂಕಃ **26.06.2024** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ವೈ.ಪಿ.ಎಂ ರವರಿಂದ ಃ-**

1. ದಿನಾಂಕಃ **28.02.2020** ರಲ್ಲಿ ನನ್ನ ಗಂಡ ಮರಣ ಹೊಂದಿರುತ್ತಾರೆ. ನನ್ನ ಗಂಡ ಮರಣ ಹೊಂದಿದ ಸಂದರ್ಬದಲ್ಲಿ ನಾನು ತುಂಬಿದ ಗರ್ಬಿಣಿ ಆದ ಕಾರಣ ನಾನು ನನ್ನ ತಾಯಿಯ ಮನೆಯಲ್ಲಿ ಇದೆ.

2. ನಾನು ನನ್ನ ವಿವಾಹ ಆದ ನಂತರ ಬರುವೆ ಗ್ರಾಮದಲ್ಲಿ ವಾಸವಾಗಿರುತ್ತೇವೆ. ನನ್ನ ಮದದಾರರ ಗುರುತಿನ ಚೀಟಿ ಮತ್ತು ನನ್ನ ಇತರೆ ದಾಖಲೆಗಳು ನನ್ನ ಗಂಡನ ವಿಳಾಸದಲ್ಲಿ ಇರವುದಿಲ್ಲ ಮತದಾರರ ಗುರುತಿನ ಚೀಟಿ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ.

3. ನಾನು ಮತ್ತು ನನ್ನ ಗಂಡ ಬೆಂಗಳೂರಿನಲ್ಲಿ ಸ್ವಂತ ದುಡಿಮೆ ಮಾಡಿಕೊಂಡು ಇರುತ್ತೇವೆ ಎಂದರೆ ಸರಿಯಲ್ಲ.

4. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ವಂಶಕೃಕ್ಷ ನನ್ನ ಗಂಡ ತಯಾರಿಸಿರುತ್ತಾರೆ.

5. ದಾವಾ ಆಸ್ತಿಗಳು ಪ್ರತಿವಾದಿ 1 ರವರ ಅಮ್ಮನ ಕಡೆಯಿಂದ ಬಂದಿರುತ್ತದೆ. ಈಗ ದಾವಾ ಆಸ್ತಿಗಳು ಪ್ರತಿವಾದಿ 1 ರವರ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿಗಳು ಪ್ರತಿವಾದಿ 1 ರವರ ಸ್ವಯಾರ್ಜಿ ಆಸ್ತಿಗಳಾಗಿರುತ್ತವೆ ಎಂದರೆ ಸಾಕ್ಷಿಯು ಪ್ರತಿವಾದಿಯವರು ತನ್ನ ಅಮ್ಮನಿಂದ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

6. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಕಂದಾಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

7. ದಾವಾ ಆಸ್ತಿ ಕ್ರಮ ಸಂಖ್ಯೆ 3 ಮತ್ತು 4 ನಮ್ಮ ಅತ್ತೆಯ ಹೆಸರಿನಲ್ಲಿ ಇರುತ್ತದೆ. ಸದರಿ ಮನೆಗಳು ಸರ್ಕಾರಿ ಜಾಗದಲ್ಲಿ ಇರುತ್ತದೆ ಎಂದರೆ ಸರಿ.

8. ನನ್ನ ಮದುವೆ ಕಾಲದಲ್ಲಿ ಪ್ರತಿವಾದಿ 1 ರವರು ತನ್ನ ಸಹೋದರರೊಂದಿಗೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನಾನೇ ನನ್ನ ಗಂಡನ ಮರಣದ ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಯಾವುದೇ ಸೌಲಭ್ಯ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

9. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿರುವುದಿಲ್ಲ ಆದ್ದರಿಂದ ನನಗೂ ನನ್ನ ಮಗಳಿಗೂ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

10. 1 ಮತ್ತು 2 ನೇ ಪ್ರತಿವಾದಿಯರು ಒಂದೇ ಕುಟುಂಬದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪ್ರತಿವಾದಿ 1 ರವರಿಗೆ ತಮ್ಮ ತಾಯಿಯಿಂದ ಬಂದ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.